# ಹರಿಕಥಾಮೃತಸಾರ - ೧೪

## ಪಿತೃಗಣ ವಿಚಾರ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಕೃತಿರಮಣ ಪ್ರದ್ಯುಮ್ನ ವಸುದೇ|ವತೆಗಳಾಹಂಕಾರತ್ರಯದೊಳು |
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು ||
ಹುತವಹಾಖ್ಯಾಂತರ್ಗತ ಜಯಾ|ಪತಿಯು ತಾನೇ ಮೂರಧಿಕ ತ್ರಿಂ |
ಶತಿ ಸುರೂಪದಿ ಭೋಕ್ತೃಗಳೊಳಿದ್ದು || ||೧೪-೦೧||

ಆರಧಿಕಮೂವತ್ತು ರೂಪದಿ | ವಾರಿಜಾಪ್ತನೊಳಿರುತಿಹನು ಮಾ |
ಯಾರಮಣ ಶ್ರೀವಾಸುದೇವನು ಕಾಲನಾಮದಲಿ ||
ಮೂರುವಿಧ ಪಿತೃಗಳೊಳು ವಸು ತ್ರಿಪು|ರಾರಿ ಆದಿತ್ಯಗನಿರುದ್ಧನು |
ತೋರಿಕೊಳ್ಳದೆ ಕರ್ತೃಕರ್ಮ ಕ್ರಿಯನೆನಿಸಿಕೊಂಬ || ||೧೪-೦೨||

ಸ್ವವಶ ನಾರಾಯಣನು ತಾ ಷಣ್ಣವತಿನಾಮದಿ ಕರೆಸುತಲಿ ವಸು |
ಶಿವ ದಿವಾಕರ ಕರ್ತೃ ಕರ್ಮ ಕ್ರಿಯೆಗಳೊಳಗಿದ್ದು ||
ನೆವನವಿಲ್ಲದೆ ನಿತ್ಯದಲಿ ತನ್ನವರು ಮಾಡುವ ಸೇವೆ ಕೈಕೊಂ |
ಡವರ ಪಿತೃಗಳಿಗೀವನಂತಾನಂತ ಸುಖಗಳನು || ||೧೪-೦೩||

ತಂತುಪಟದಂದದಲಿ ಲಕುಮೀ|ಕಾಂತ ಪಂಚಾತ್ಮಕನೆನಿಸಿ ವಸು |
ಕಂತುಹರ ರವಿ ಕರ್ತೃಗಳೊಳಗಿದ್ದನವರತ ತನ್ನ ||
ಚಿಂತಿಸುವ ಸಂತರನು ಗುರು ಮ|ಧ್ವಾಂತರಾತ್ಮಕ ಸಂತಯಿಸುವನು |
ಸಂತತಖಿಳಾರ್ಥಗಳ ಪಾಲಿಸಿ ಇಹಪರಂಗಳಲಿ || ||೧೪-೦೪||

ತಂದೆತಾಯ್ಗಳ ಪ್ರೀತಿಗೋಸುಗ | ನಿಂದ್ಯಕರ್ಮವ ತೊರೆದು ವಿಹಿತಗ |
ಳೊಂದು ಮೀರದೆ ಸಾಂಗಕರ್ಮಗಳಾಚರಿಸುವವರು ||
ವಂದನೀಯರಾಗಿಳೆಯೊಳಗೆ ದೈ|ನುದಿನದಿ ದೈಶಿಕ ದಹಿಕ ಸುಖ |
ದಿಂದ ಬಾಳ್ವರು ಬಹು ದಿವಸದಲಿ ಕೀರ್ತಿಯುತರಾಗಿ || ||೧೪-೦೫||

ಅಂಶಿ ಅಂಶಾಂತರ್ಗತತ್ರಯ | ಹಂಸವಾಹನ ಮುಖ್ಯದಿವಿಜರ |
ಸಾಂಶಯದಿ ತಿಳಿದಂತರಾತ್ಮಕ ಶ್ರೀ ಜನಾರ್ದನನ ||
ಸಂಸ್ಮರಣ ಪೂರ್ವಕದಿ ಷಡಧಿಕ | ತ್ರಿಂಶತಿತ್ರಯರೂಪವರಿತು ವಿ |
ಪಾಂಸಗನ ಪೂಜಿಸುವರವರೆ ಕೃತಾರ್ಥರೆನಿಸುವರು || ||೧೪-೦೬||

ಮೂರುವರೆಸಾವಿರದ ಮೇಲೈನೂರೈದು ರೂಪದಿ ಜನಾರ್ದನ |
ಸೂರಿಗಳು ಮಾಡುವ ಸಮಾರಾಧನೆಗೆ ವಿಘ್ನಗಳು ||
ಬಾರದಂತೆ ಬಹುಪ್ರಕಾರ ಖರಾರಿ ಕಾಪಾಡುವನು ಸರ್ವ ಶ |
ರೀರಗಳೊಳಿದ್ದವರವರ ಪೆಸರಿಂದ ಕರೆಸುತಲಿ || ||೧೪-೦೭||

ಜಯ ಜಯ ಜಯಾಕಾಂತ ದತ್ತಾತ್ರೇಯ ಕಪಿಲ ಮಹಿದಾಸ ಭಕ್ತ |
ಪ್ರಿಯ ಪುರಾತನಪುರುಷ ಪೂರ್ಣಾನಂದ ಜ್ಞಾನಘನ ||
ಹಯವದನ ಹರಿ ಹಂಸ ಲೋಕತ್ರಯವಿಲಕ್ಷಣ ನಿಖಿಳಜಗದಾ |
ಶ್ರಯ ನಿರಾಮಯ ದಯದಿ ಸಂತೈಸೆಂದು ಪ್ರಾರ್ಥಿಪುದು || ||೧೪-೦೮||

ಷಣ್ಣವತಿಯೆಂಬಕ್ಷರೆಡ್ಯನು | ಷಣ್ಣವತಿ ನಾಮದಲಿ ಕರೆಸುತ |
ತನ್ನವರು ಸದ್ಭಕ್ತಿ ಪೂರ್ವಕದಿಂದೇ ಮಾಡುತಿಹ ||
ಪುಣ್ಯ ಕರ್ಮವ ಸ್ವೀಕರಿಸಿ ಕಾರುಣ್ಯಸಾಗರ ಸಲಹುವನು ಬ್ರ |
ಹ್ಮಣ್ಯ ದೇವ ಭವಾಬ್ಧಿಪೋತ ಬಹುಪ್ರಕಾರದಲಿ || ||೧೪-೦೯||

ದೇಹಗಳ ಕೊಡುವವನು ಆವರವರಾಹರವನು ಕೊಡದಿಹನೆ ಸುಮನಸ |
ಮಹಿತ ಮಂಗಳಚರಿತ ಸದ್ಗುಣಭರಿತನನವರತ ||
ಐಹಿಕಪಾರತ್ರಿಕ ಸುಖಪ್ರದ | ವಹಿಸಿ ಬೆನ್ನಿಲಿ ಬೆಟ್ಟವಮೃತವ |
ದ್ರುಹಿಣ ಮೊದಲಾದವರಿಗುಣಿಸಿದ ಮುರಿದನಹಿತರನು || ||೧೪-೧೦||

ದ್ರುಹಿಣ ಮೊದಲಾದಮರರಿಗೆ ಸನ್ಮಹಿತ ಮಾಯಾರಮಣ ತಾನೇ |
ಸ್ವಹನೆನಿಸಿ ಸಂತೃಪ್ತಿ ಬಡಿಸುವ ಸರ್ವಕಾಲದಲಿ ||
ಪ್ರಹಿತ ಸಂಕರ್ಷಣನು ಪಿತೃಗಳಿಗಹರನೆನಿಪ ಸ್ವಧಾಖ್ಯರೂಪದಿ |
ಮಹಿಜ ಫಲತೃಣ ಪೆಸರಿನಲಿ ಪ್ರದ್ಯುಮ್ನ ಅನಿರುದ್ಧ || ||೧೪-೧೧||

ಅನ್ನನೆನಿಸುವ ನೃಪಶುಗಳಿಗೆ ಹಿರಣ್ಯಗರ್ಭಾಂಡದೊಳು ಸಂತತ |
ತನ್ನನೀಪರಿಯಿಂದುಪಾಸನೆಗೈವ ಭಕುತರನ ||
ಬನ್ನಬಡಿಸದೆ ಭವಸಮುದ್ರ ಮಹೋನ್ನತಿಯ ದಾಟಿಸಿ ಚತುರ್ವಿಧ |
ಅನ್ನಮಯನಾತ್ಮಪ್ರದರ್ಶನ ಸುಖನೀವ ಹರಿ || ||೧೪-೧೨||

ಮನವಚನಾಯಗಳ ದೆಶೆಯಿಂದನುದಿನದಿ ಬಿಡದಾಚರಿಸುತಿ |
ಪ್ಪನುಚಿತೋಚಿತ ಕರ್ಮಗಳ ಸದ್ಭಕ್ತಿಪೂರ್ವಕದಿ ||
ಅನಿಳದೇವನೊಳಿಪ್ಪ ನಾರಾಯಣಗಿದನ್ನವು ಎಂದು ಕೃಷ್ಣಾ |
ರ್ಪಣವೆನುತ ಕೊಡೆ ಸ್ವೀಕರಿಸಿ ಸಂತೈಪ ಕರುಣಾಳು || ||೧೪-೧೩||

ಏಳುವಿಧದನ್ನಪ್ರಕರಣವ | ಕೇಳಿ ಕೋವಿದರಾಸ್ಯದಿಂದಲಿ |
ಆಲಸವ ಮಾಡದಲೆ ಅನಿರುದ್ಧಾದಿ ರೂಪಗಳ ||
ಕಾಲಕಾಲದಿ ನೆನೆದು ಪೂಜಿಸು | ಸ್ಥೂಲಮತಿಗಳಿಗಿದನು ಪೇಳದೆ |
ಶ್ರೀ ಲಕುಮಿವಲ್ಲಭನೆ ಅನ್ನಾದನ್ನ ಅನ್ನದನು || ||೧೪-೧೪||

ಎಂದರಿದತು ಸಪ್ತಾನ್ನಗಳ ದೈನಂದಿನದಿ ಮರೆಯದೆ ಸದಾ ಗೋ |
ವಿಂದಗರ್ಪಿಸು ನಿರ್ಭಯದಿ ಮಹಯಜ್ಞವಿದುಯೆಂದು ||
ಇಂದಿರೇಶನು ಸ್ವೀಕರಿಸಿ ದಯದಿಂದೇ ಬೇಡಿಸಿಕೊಳದೆ ತವಕದಿ |
ತಂದು ಕೊಡುವನು ಪರಮಮಂಗಳ ತನ್ನ ದಾಸರಿಗೆ || ||೧೪-೧೫||

ಸೂಜಿ ಕರದಲಿ ಪಿಡಿದು ಸಮರವ | ನಾ ಜಯಿಸುವೆನು ಎಂಬ ನರನಂ |
ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ ||
ಶ್ರೀ ಜಗತ್ಪತಿ ಚರಣಯುಗಳಸರೋಜ ಭಕ್ತಿಜ್ಞಾನಪೂರ್ವಕ |
ಪೂಜಿಸದೆ ಧರ್ಮಾರ್ಥಕಾಮವ ಬಯಸಿ ಬಳಲುವರು || ||೧೪-೧೬||

ಶಕಟಭಂಜನ ಸಕಲ ಜೀವರ | ನಿಕಟಗನು ತಾನಾಗಿ ಲೋಕಕೆ |
ಪ್ರಕಟನಾಗದೆ ಸಕಲಕರ್ಮವ ಮಾಡಿ ಮಾಡಿಸುತ ||
ಅಕುಟಿಲಾತ್ಮಕ ಭಕುತ ಜನರಿಗೆ | ಸುಖದನೆನಿಸುವ ಸರ್ವಕಾಲದಿ |
ಅಕಟಕಟ ಈತನ ಮಹಾಮಹಿಮೆಗಳಿಗೇನೆಂಬೆ || ||೧೪-೧೭||

ಶ್ರೀ ಲಕುಮಿವಲ್ಲಭನು ವೈಕುಂಠಾಲಯದಿ ಪ್ರಣವ ಪ್ರಕೃತಿ ಕೀ |
ಲಾಲಜಾಸನಮುಖ್ಯ ಚೇತನರೊಳಗೆ ನೆಲೆಸಿದ್ದು ||
ಮೂಲಕಾರಣ ಅಂಶನಾಮದಿ | ಲೀಲೆಗೈಸುತ ತೋರಿಕೊಳ್ಳದೆ |
ಪಾಲಿನೊಳು ಘೃತವಿದ್ದ ತೆರದಂತಿಪ್ಪ ತ್ರಿಸ್ಥಳದಿ || ||೧೪-೧೮||

ಮೂರುಯುಗದಲಿ ಮೂಲರೂಪನು | ಸೂರಿಗಳ ಸಂತೈಸಿ ದಿತಿಯ ಕು |
ಮಾರಕರ ಸಂಹರಿಸಿ ಧರ್ಮವನುಳುಹಬೇಕೆಂದು ||
ಕಾರುಣಿಕ ಭೂಮಿಯೊಳು ನಿಜಪರಿವಾರಸಹಿತವತರಿಸಿ ಬಹುವಿಧ |
ತೋರಿದನು ನರವತ್ರ ವೃತ್ತಿಯ ಸಕಲ ಚೇತನಕೆ || ||೧೪-೧೯||

ಕಾರಣಾಹ್ವಯ ಪ್ರಕೃತಿಯೊಳಗಿದ್ದಾರಧಿಕ ಹದಿನೆಂಟು ತತ್ವವ |
ತಾ ರಚಿಸಿ ತದ್ರೂಪ ತನ್ನಾಮಂಗಳಗನೆ ಧರಿಸಿ ||
ನೀರಜಭವಾಂಡವನು ನಿರ್ಮಿಸಿ | ಕಾರುಣಿಕ ಕಾರ್ಯಾಖ್ಯ ರೂಪದಿ |
ತೋರುವನು ಸಹಜಾಹಿತಾಚಲಗಳಲಿ ಪ್ರತಿದಿನದಿ || ||೧೪-೨೦||

ಜೀವರಂತರ್ಯಾಮಿ ಅಂಶಿ ಕಳೇವರಗಳೊಳಗಿಂದ್ರಿಯಗಳಲಿ ।
ತಾ ವಿಹಾರವ ಗೈಯುತನುದಿನ ಅಂಶನಾಮದಲಿ ॥
ಈ ವಿಷಯಗಳನುಂಡು ಸುಖಮಯ । ಈವ ಸುಖ ಸಂಸಾರದುಃಖವ ।
ದೇವಮಾನವದಾನವರಿಗವಿರತ ಸುದಾಮಸಖ ॥ ||೧೪-೨೦||

ದೇಶದೇಶವ ಸುತ್ತಿ ದೇಹಾಯಾಸಗೊಳಿಸದೆ ಕಾಮ್ಯಕರ್ಮ ದು ।
ರಾಶಿಗೊಳಗಾಗದಲೆ ಬ್ರಹ್ಮಾದ್ಯಖಿಳ ಚೇತನರು ॥
ಭೂ ಸಲಿಲ ಪಾವಕ ಸಮೀರಾಕಾಶ ಮೊದಲಾದಖಿಳ ತತ್ತ್ವಪ ।
ರೇಶಗಿವಧಿಷ್ಠಾನವೆಂದರಿತರ್ಚಿಸನವರತ ॥ ||೧೪-೨೧||

ಎರಡು ವಿಧದಲಿ ಲೋಕದೊಳು ಜೀವರುಗಳಿಪ್ಪರು ಸಂತತ ಕ್ಷರಾ ।
ಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯ ಭೇದದಲಿ ॥
ಕರೆಸುವದು ಜಡಪ್ರಕೃತಿ ಪ್ರಣವಾಕ್ಷರ ಮಹಾದಣುಕಾಲನಾಮದಿ ।
ಹರಿಸಹಿತ ಭೇದಗಳಪಂಚಕ ಸ್ಮರಿಸು ಸರ್ವತ್ರ ॥ ||೧೪-೨೩||

ಜೀವಜೀವರ ಭೇದ ಜಡಜಡ । ಜೀವಜಡಗಳ ಭೇದ ಪರಮನು ।
ಜೀವಜಡ ಸುವಿಲಕ್ಷಣನು ಎಂದರಿದು ನಿತ್ಯದಲಿ ॥
ಈ ವಿರಿಂಚಾಂಡದಲಿ ಎಲ್ಲಾ । ಠಾವಿನಲಿ ತಿಳಿದೈದು ಭೇದ ಕ ।
ಳೇವರದೊಳರಿತಚ್ಯುತನ ಪದ ಐದು ಶೀಘ್ರದಲಿ ॥ ||೧೪-೨೪||

ಆದಿಯಲಿ ಕ್ಷರಾಕ್ಷರಾಖ್ಯದ್ವೇಧ ಅಕ್ಷರದೊಳು ರಮಾ ಮಧು ।
ಸೂದನರು ಕ್ಷರಗಳೊಳು ಪ್ರಕೃತಿ ಪ್ರಣವಕಾಲಗಳು ॥
ವೇಧಮುಖ್ಯ ತೃಣಾಂತಜೀವರ । ಭೇದಗಳನರಿತೀ ರಹಸ್ಯವ ।
ಬೋಧಿಸದೆ ಮಂದರಿಗೆ ಸರ್ವತ್ರದಲಿ ಚಿಂತಿಪುದು ॥ ||೧೪-೨೫||

ದೀಪದಿಂ ದೀಪಗಳು ಪೊರಮಟ್ಟಾಪಣಾಲಯಗತ ತಿಮಿರಗಳ ।
ತಾ ಪರಿಹರಗೈಸಿ ತದ್ಗತ ಪದಾರ್ಥ ತೋರ್ಪಂತೆ ॥
ಸೌಪರಣಿ ವರವಹನ ತಾ ಬಹುರೂಪನಾಮದಿ ಎಲ್ಲ ಕಡೆಯಲಿ ।
ವ್ಯಾಪಿಸಿದ್ದು ಯಥೇಷ್ಟ ಮಹಿಮೆಯ ತೋರ್ಪ ತಿಳಿಸದಲೆ ॥ ||೧೪-೨೬||

ನಳಿನಮಿತ್ರಗೆ ಇಂದ್ರಧನು ಪ್ರತಿಫಲಿಸುವಂತೆ ಜಗತ್ರಯವು ಕಂ ।
ಗೊಳಿಪದನುಪಾಧಿಯಲಿ ಪ್ರತಿಬಿಂಬಾಹ್ವಯದಿ ಹರಿಗೆ ॥
ತಿಳಿಯೆ ತ್ರಿಕಕುದ್ಧಾಮನತಿಮಂಗಳ ಸುರೂಪವ ಸರ್ವ ಠಾವಿಲಿ ।
ಪೊಳೆವ ಹೃದಯಕೆ ಪ್ರತಿದಿವಸ ಪ್ರಹ್ಲಾದಪೋಷಕನು ॥ ||೧೪-೨೬||

ರಸವಿಶೇಷದೊಳತಿವಿಮಲ ಸಿತ|ವಸನ ತೋಯಿಸಿ ಅಗ್ನಿಯೊಳಗಿಡೆ |
ಪಸರಿಸುವುದು ಪ್ರಕಾಶ ನಸುಗುಂದದಲಿ ಸರ್ವತ್ರ ||
ತ್ರಿಶಿರದೂಷಣವೈರಿ ಭಕ್ತಸು|ರಸದಿ ತೋಯ್ದ ಮಹಾತ್ಮರನು ಬಾ |
ಧಿಸವು ಭವದೊಳಗಿದ್ದರೆಯು ಸರಿ ದುರಿತರಾಶಿಗಳು ||         ||೧೪-೨೮||

ವಾರಿಧಿಯೊಳಗಖಿಳ ನದಿಗಳು | ಬೇರೆ ಬೇರೆ ನಿರಂತರದಲಿ ವಿ |
ಹಾರಗೈವುತ ಪರಮಮೋದದಲಿಪ್ಪ ತೆರನಂತೆ ||
ಮೂರು ಗುಣಗಳ ಮಾನಿಯೆನಿಸುವ | ಶ್ರೀರಮಾರೂಪಗಳು ಹರಿಯಲಿ |
ತೋರುತಿಪ್ಪವು ಸರ್ವಕಾಲದಿ ಸಮರಹಿತವೆನಿಸಿ ||         ||೧೪-೨೯||

ಕೋಕನದಸಖನುದಯ ಘೂಕಾ|ಲೋಕನಕೆ ಸೊಗಸದಿರೆ ಭಾಸ್ಕರ |
ತಾ ಕಳಂಕನೆ ಈ ಕೃತಿಪತಿ ಜಗನ್ನಾಥನಿರೆ ||
ಸ್ವೀಕರಿಸಿ ಸುಖಬಡಲರಿಯದವಿ|ವೇಕಿಗಳು ನಿಂದಿಸಿದರೇನಹು |
ದೀ ಕವಿತ್ವವ ಕೇಳಿ ಸುಖಬಡದಿಹರೆ ಕೋವಿದರು         ||೧೪-೩೦||

ಚೇತನಾಚೇತನಗಳಲಿ ಗುರು|ಮಾತರಿಶ್ವಾಂತರ್ಗತ ಜಗ |
ನ್ನಾಥವಿಟ್ಠಲ ನಿರಂತರದಿ ವ್ಯಾಪಿಸಿ ತಿಳಿಸಿಕೊಳದೆ ||
ಕಾತುರವ ಪುಟ್ಟಿಸಿ ವಿಷಯದಲಿ | ಯಾತುಧಾನರ ಮೋಹಿಸುವ ನಿ |
ರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ ||         ||೧೪-೩೧||

ooooooooooooooooooooooooooooooooooo